# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/54/2015-16 ದಿನಾಂಕ: 30-10-2015.

## ಭಾಗಷಃ ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಆಸ್ತಿ ಸಂಖ್ಯೆ 3289/3664/8/62, ಪಟ್ಟಣಗೆರೆ ಗ್ರಾಮ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ 198, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ಬಿಲ್ಡಿಂಗ್ 1 ರ ವಿಂಗ್ ಎ ಮತ್ತು ಬಿ ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: JDTP (S)/ LP 26/10-11 ದಿನಾಂಕ: 01-04-2013.
2) ಅರ್ಜಿದಾರರ ಮನವಿ ದಿನಾಂಕ: 25-06-2015.
3) ಅಪರ ನಿರ್ದೇಶಕರು, ನಗರ ಯೋಜನೆ ರವರ ಆದೇಶ ದಿನಾಂಕ: 09-10-2015.

*****

ಪಟ್ಟಣಗೆರೆ ಗ್ರಾಮ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ 198 ರಲ್ಲಿರುವ ಆಸ್ತಿ ಸಂಖ್ಯೆ 3289/3664/8/62 ಇಲ್ಲಿ JDTP (S)/ LP 26/10-11 ದಿನಾಂಕ: 01-04-2013 ರಂದು ಬಿಲ್ಡಿಂಗ್ 1 ರ ವಿಂಗ್ – ಎ, ಬಿ, ಸಿ ಮತ್ತು ಡಿ ರಲ್ಲಿ ತಳ+ನೆಲ+ಮೇಲಿನ 13 ಅಂತಸ್ತುಗಳು ಮತ್ತು ಬಿಲ್ಡಿಂಗ್ 2 ರ ವಿಂಗ್ ಇ ರಲ್ಲಿ ನೆಲ+ಮೇಲಿನ 9 ಅಂತಸ್ತುಗಳ ಒಟ್ಟು 411 ಘಟಕಗಳುಳ್ಳ ವಸತಿ ಸಮುಚ್ಛಯ ಕಟ್ಟಡಕ್ಕೆ ಈ ಕಛೇರಿಯಿಂದ ಪರಿಷ್ಕೃತ ನಕ್ಷೆ ಮಂಜೂರಾತಿ ನೀಡಲಾಗಿದೆ. ಮತ್ತು ದಿನಾಂಕ: 29-07-2010 ರಂದು ರಾಜರಾಜೇಶ್ವರಿನಗರ ವಲಯ ಕಛೇರಿಯಿಂದ ಪ್ರಾರಂಭಿಕ ಪ್ರಮಾಣ ಪತ್ರ ಪಡೆದಿರುತ್ತಾರೆ. ಬಿಲ್ಡಿಂಗ್ 1 ರ ವಿಂಗ್ ಎ ಮತ್ತು ಬಿ ರ ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿ: 27-08-2015 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 85,000/- ಗಳನ್ನು ಅರ್ಜಿದಾರರು ರಶೀದಿ ಸಂಖ್ಯೆ: RE-ifms624-TP/000024 ದಿನಾಂಕ: 29-10-2015 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ಬಿಲ್ಡಿಂಗ್ 1 ರ ವಿಂಗ್ ಎ ಮತ್ತು ಬಿ ರ ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

30/10

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

30/10/15 30/10 30/10

ಗೆ,
ಮೆ|| ವಿನಾಯಕ ಬಿಲ್ಡರ್ಸ್ ಮತ್ತು ಡೆವಲಪರ್ಸ್,
ಶ್ರೀ ಪಿ. ರವೀಂದ್ರ ಪೈ ಮತ್ತು ಇತರರು
# 3289/3664/8/62, ಹಲಗೆವಡೇರಹಳ್ಳಿ ಗ್ರಾಮ,
ರಾಜರಾಜೇಶ್ವರಿನಗರ ವಲಯ, ಬೆಂಗಳೂರು.